

## ನಾಗರಹಾವಿನ ಕೆಂಪೇರಿದ ಹೆಡೆ!

ಪರಿಚಿತರೊಬ್ಬರ ಕರೆ 'ಹೊಲ್ದಾಗ ನಾಗರಹಾವುಮುಂಗುಸಿ ಹೊಡದಾಡಕ ಬಿದ್ದಾವು ಗಡಾ ಬರ್ರೀ' ಎಂಬ ಮಾತಿನಿಂದ ಕಡಿತಗೊಂಡಿತು. ಕೆಲವೇ ನಿಮಿಷಗಳಲ್ಲಿ ಅವರು ಸೂಚಿಸಿದ್ದ ಹೊಲಕ್ಕೆ ಹೋದೆ. ಮಧ್ಯಾಹ್ನದ ಉರಿಬಿಸಿಲಿನಲ್ಲಿ ಮುಖಾಮುಖಿಯಾಗಿದ್ದ ನಾಗರಹಾವು ಹಾಗೂ ಮುಂಗುಸಿ ಮುಂದಿನ ಹಲವು ನಿಮಿಷಗಳ ಕಾಲ ಘೋರ ಯುದ್ಧವನ್ನೇ ಮಾಡಿದ್ದವು. ನೆಲದ ಮೇಲೆ ಅಲ್ಲಲ್ಲಿ ಸಿಂಪಡಿಸಿದಂತೆ ಚೆಲ್ಲಿದ್ದ ರಕ್ತ, ನೆಲಕ್ಕೆ ಬಾಗಿ ಅದಾಗ ತಾನೆ ಮೇಲೇಳಲು ಯತ್ನಿಸುತ್ತಿದ್ದ ಹುಲ್ಲು ಹಾಗೂ ರಾಗಿಹಿಟ್ಟಿನಂತಾಗಿದ್ದ ಹುಡಿಮಣ್ಣು ನಡೆದಿದ್ದ ಕಾದಾಟಕ್ಕೆ ಮೂಕಸಾಕ್ಷಿಗಳಾಗಿದ್ದವು.

ನನಗಿಂತ ಮುಂಚೆ ಅಲ್ಲಿ ಸೇರಿದ್ದ ಕೆಲವರು ಜಗಳವನ್ನು ಬಿಡಿಸಿ ಮುಂಗುಸಿಯನ್ನು ಅಲ್ಲಿಂದ ಓಡಿಸಿದ್ದರು. ಜೀವದಾನ ಪಡೆದ ನಾಗರಹಾವು ಸಣ್ಣ ಗಿಡವನ್ನೇರಿ ಮುಂಗುಸಿ ಓಡಿಹೋಗಿದ್ದ ಪೊದೆಯೆಡೆಗೆ ಹೆಡೆಬಿಚ್ಚಿ ಕೂತಿತ್ತು. ನೆರೆದಿದ್ದವರೆಲ್ಲಾ ಹಾವಿಗೆ ವಂದಿಸುತ್ತಾ ತಮ್ಮ ಭಯಮಿಶ್ರಿತ ಗೌರವವನ್ನು ಹಾಗೂ ತಮ್ಮಿಂದ ಹಾವಿನ ಜೀವವುಳಿಯಿತೆಂದು ಸಾರ್ಥಕಭಾವವನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ನಿಸರ್ಗದಲ್ಲಿ ಹಾವು– ಮುಂಗುಸಿ ಪರಸ್ಪರ ವೈರಿಗಳಲ್ಲ. ಹಾವು, ಮುಂಗುಸಿಯ ಆಹಾರ ಅಷ್ಟೇ. ಹಾವಿನ ಜಾಗದಲ್ಲಿ ಚೇಳು ಎದುರುಗೊಂಡಿದ್ದರೂ ಮುಂಗುಸಿಯ ಪ್ರತಿಕ್ರಿಯೆ ಒಂದೇ ಆಗಿರುತ್ತಿತ್ತು. ಹಾವುಮುಂಗುಸಿಗಳ ಸುತ್ತ ಹಬ್ಬಿರುವ ಕಾಲ್ಪನಿಕ ಕಥೆಗಳು ನಿಜವಲ್ಲ.

–ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ

## ಹಪ್ಪಳ ಮಾಡುವ ಉಜ್ಜೇರು

ಬೇಸಿಗೆ ಬಂತೆಂದರೆ ಹಪ್ಪಳ ಸಂಡಿಗೆ ಮಾಡಲು ಸಕಾಲ ಎಂದೇ ಅರ್ಥ. ಹಲಸಿನಕಾಯಿಯ ಹಪ್ಪಳ ಎಂದಾಕ್ಷಣ ನೆನಪಾಗುವುದು ಕರಾವಳಿ, ಮಲೆನಾಡು. ಇಲ್ಲಿ ಎಲ್ಲರ ಮನೆಗಳಲ್ಲಿ ಹಪ್ಪಳ ಇಲ್ಲಿ ನಿತ್ಯಕಾಯಕ. ಹಪ್ಪಳ ಮಾಡಲು ಸೂಕ್ತವಾದ ಮರಗಳನ್ನು ಗುರುತಿಸಿ, ಅದರಿಂದಲೇ ನೂರಾರು ಹಪ್ಪಳಗಳನ್ನು ತಯಾರಿಸುತ್ತಾರೆ. ಕೆಲವರು ಮಾರಿ ಜೀವನೋಪಾಯವನ್ನೂ ಸಾಗಿಸುತ್ತಾರೆ. ಹಲಸಿನ ತೊಳೆಗಳನ್ನು ಹಬೆಯಲ್ಲಿ ಬೇಯಿಸಿ ಒರಳು ಕಲ್ಲಿನಲ್ಲಿ ಹಾಕಿ ಗುದ್ದಿದಾಗ ಒಂದು ಮುದ್ದೆಯಾಗಿ ಆಗುತ್ತದೆ. ಅದನ್ನು ಗುದ್ದಲೆಂದೇ ವಿಶೇಷವಾದ ವಿನ್ಯಾಸದಲ್ಲಿ ಒನಕೆಯನ್ನು ತಯಾರಿಸಿ ಇಟ್ಟುಕೊಂಡಿರುತ್ತಾರೆ. ಮಧ್ಯದಲ್ಲಿ ಕೈಹಿಡಿಯುವಷ್ಟು ದಪ್ಪ, ಕೆಳಭಾಗ ಚಪ್ಪಟೆ, ಮೇಲ್ಭಾಗ ದುಂಡನೆ ಆಕಾರವಾಗಿರುತ್ತದೆ. ಗುದ್ದಿದ ತಕ್ಷಣ ಮೇಲೆ ಹಾರಬಾರದೆಂದು ಈ ರೀತಿಯ ರಚನೆ ಮಾಡಿರುತ್ತಾರೆ. ಇದು ಸಾಧಾರಣವಾಗಿ ಎಲ್ಲರ ಮನೆಗಳಲ್ಲಿಯೂ ಇರುತ್ತದೆ. ಇದನ್ನು ತುಳು ಭಾಷೆಯಲ್ಲಿ 'ಉಜ್ಜೇರು' ಎಂದು ಕರೆಯುತ್ತಾರೆ.

–ಪುಷ್ಪ ಎನ್.ಕೆ. ರಾವ್



## ಆಹಾ ಪಿಲಿ ನಲಿಕೆ

ಚಿತ್ರದಲ್ಲಿ ಕಾಣಿಸುತ್ತಿರುವುದು ತುಳುವಿನಲ್ಲಿ 'ಪಿಲಿ ಯೇಸ' ಎಂದು ಕರೆಯಲಾಗುವ ಸಾಂಪ್ರದಾಯಿಕ ಜಾನಪದ ಕಲಾ ಪ್ರಕಾರವಾದ ಪಿಲಿ ನಲಿಕೆಯ ಹುಲಿ ವೇಷದ ಶಿಲ್ಪ. ಇದನ್ನು ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಗಮನ ಸ್ಥಳದಲ್ಲಿ ಸ್ಥಾಪಿಸಲಾಗಿದೆ. ಹುಲಿ ವೇಷಧಾರಿಗಳ ವಿವಿಧ ಭಂಗಿಯ ಕಲಾಕೃತಿ, ಸಾಂಪ್ರದಾಯಿಕ ದೋಣಿಯ ಲೋಹಾಕೃತಿ ಇತ್ಯಾದಿಗಳು ಇಲ್ಲಿ ಮನಸೆಳೆಯುತ್ತವೆ.

ಹುಲಿ ವೇಷಧಾರಿಗಳು ತಮ್ಮ ದೇಹದ ಮೇಲೆ ಪಟ್ಟೆಗಳನ್ನು ಚಿತ್ರಿಸಿಕೊಳ್ಳುತ್ತಾರೆ ಮತ್ತು ಹುಲಿಗಳನ್ನು ಹೋಲುವಂತೆ ಮುಖವಾಡಗಳನ್ನು ಧರಿಸುತ್ತಾರೆ. ಹುಲಿಯು ದುರ್ಗೆಯ ವಾಹನವಾಗಿದೆ. ಹಾಗೆಂದೇ ಹುಲಿ ನರ್ತನವನ್ನು ಸಾಮಾನ್ಯವಾಗಿ ನವರಾತ್ರಿ/ ದಸರಾ ಹಬ್ಬದ ಸಮಯದಲ್ಲಿ ದುರ್ಗಾದೇವಿಗೆ ಭಕ್ತಿಪೂರ್ವಕವಾಗಿ ಸಮರ್ಪಿಸಲಾಗುತ್ತದೆ. ಬಡಿದೆಬ್ಬಿಸುವ ವಿಶಿಷ್ಟ ಬ್ಯಾಂಡ್ ವಾದನದ ತಾಳಕ್ಕೆ ತಕ್ಕಂತೆ ಲಯಬದ್ಧವಾಗಿ ಕುಣಿಯುವ 'ಪಿಲಿ ನಲಿಕೆ' (ಹುಲಿ ಕುಣಿತ) ಎಂಬೀ ನರ್ತನವು ಸ್ಥಳೀಯ ಸಂಸ್ಕೃತಿಯ ಒಂದು ರೋಮಾಂಚಕ ಮತ್ತು ಅವಿಭಾಜ್ಯ ಅಂಗವಾಗಿರುತ್ತದೆ.



ಇದು ವಿಮಾನ ನಿಲ್ದಾಣದ ಕಲಾ ಗ್ಯಾಲರಿಯ ಭಾಗವಾಗಿದ್ದು, ಸ್ಥಳೀಯ ಸಂಸ್ಕೃತಿ ಮತ್ತು ಥೀಮ್‌ಗಳಿಗೆ ಸಂಬಂಧಿಸಿದ ಕಂಬಳ, ಯಕ್ಷಗಾನ, ಮತ್ಸ್ಯೋದ್ಯಮ, ಕುಕ್ಕುಟ ಕದನ, ಭೂತ ದೈವದ ಕೋಲ, ಡೋಲು, ಕಳಸ ಪ್ರತಿಷ್ಠಾಪನೆ ಇತ್ಯಾದಿ ಲೋಹದ ಬಿಡಿಭಾಗಗಳಿಂದ ನಿರ್ಮಿಸಿದ ವಿವಿಧ ಪ್ರತಿಕೃತಿಗಳ ವಿಶಿಷ್ಟ ಕಲಾಪ್ರದರ್ಶನಗಳನ್ನೂ ಒಳಗೊಂಡಿದೆ. ದೂರದೂರುಗಳಲ್ಲಿ ನೆಲೆಸಿರುವ ಕರಾವಳಿ ಮಂದಿಗೆ, ತವರ ಮಣ್ಣು ಸ್ಪರ್ಶಿಸುತ್ತಲೇ ಮರೆತ ತಮ್ಮೂರಿನ ಸಾಂಸ್ಕೃತಿಕ ಸೊಗಡನ್ನು ನೆನಪಿಸಿ ಪುಳಕಿತರನ್ನಾಗಿಸುತ್ತದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ